ಕಾವೇರಿ ಅಚ್ಚುಕಟ್ಟು ಪ್ರದೇಶದ ಯೋಜನೆಗಳ ಅಭಿವೃದ್ಧಿ

120(428) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿನ ಯೋಜನೆಗಳಿಗೆ ಹಾಗೂ ಆಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಗೆ ಹಾಗೂ ನಿರ್ವಹಣೆಗೆ ರಾಜ್ಯದ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಹಣವನ್ನು ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಹೌದು. ರಾಜ್ಯದ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 340.50 ಕೋಟಿಗಳ ಹಣವನ್ನು ಒದಗಿಸಲಾಗಿದೆ.

ಆ) ಕಾವೇರಿ ಕೊಳ್ಳದ ಯೋಜನೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣದ ವಿವರ ಕೆಳಕಂಡಂತಿದೆ.

1)	4701-ಯೋಜನೇತರ	ರೂ. 30,000.00 ಲಕ್ಷ
	4701-ಯೋಜನೆ	ರೂ. 142.34 ಲಕ್ಷ
2)	2701-ಯೋಜನೇತರ	ರೂ. 2187.21 ಲಕ್ಷ
3)	2702-ಯೋಜನೇತರ	ರೂ. 381.62 ಲಕ್ಷ
4)	2705-ಯೋಜನೆ (ಕಾಡಾ)	ರೂ. 640.00 ಲಕ್ಷ
5)	3054-ಯೋಜನೇತರ	ರೂ. 698.80 ಲಕ್ಷ
	ಒಟ್ಟು	ರೂ. 34049.97 ಲಕ್ಷ

ಶ್ರೀ ಆತ್ಮಾನಂದ ಎಂ.ಎಸ್, ವಿಧಾನ ಸಭಾ ಸದಸ್ಯರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 428

ಅನುಬಂಧ

ಕಾವೇರಿ ಕಣಿವೆ ಯೋಜನೆಗಳಿಗೆ 2002-03ನೇ ಸಾಲಿನ ಆಯವ್ಯಯದಲ್ಲಿನ ಪ್ರಸ್ತಾವನೆಗಳು

ಕ್ರ. ಸಂ. ಅ)	ಯೋಜನೆಯ ಹೆಸರು	ಮೊತ್ತ (ರೂ. ಲಕ್ಷಗಳಲ್ಲಿ)
1	ವರುಣಾ/ಡಿ.ಡಿ. ಅರಸ್ ಕಾಲುವೆ	2054.12
2	ಹಾರಂಗಿ	2300.00
3	ಹೇಮಾವತಿ (ಅಣೆಕಟ್ಟು ಮತ್ತು ಕಾಲುವೆ ವಲಯಗಳು)	11393.44
4	ಕಬಿನಿ	1970.00
5	ಕೃಷ್ಣರಾಜಸಾಗರ ಆಧುನೀಕರಣ	1420.00
6	ಯಗಚಿ	1792.00
7	ಕಾವೇರಿ ಅಣೆಕಟ್ಟು ಯೋಜನೆಗಳು	1200.00
8	ಅರ್ಕಾವತಿ	731.00
9	ಚಿಕ್ಕಹೊಳೆ	60.00
10	ಹುಚ್ಚನಕೊಪ್ಪಲು	200.00
11	ಇಗ್ಗಲೂರು	400.00
12	ಕಾಮಸಮುದ್ರ	200.00
13	ಮಂಚನಬೆಲೆ	300.00
14	ತಾರಕ	30.00
15	ಉಡುಕೊರೆಹಳ್ಳ	1000.00
16	ವಾಟೇಹೊಳೆ	450.00
17	ಪೂರಿಗಾಲಿ ಏ.ನೀ.ಯೋ.	40.00
18	ನಂಜಾಪುರ	300.00
19	ಕಾಚೀನಹಳ್ಳಿ	200.00

20	ಮುಂದುವರೆದ ಹಾಗೂ ಹೊಸ ಯೋಜನೆಗಳು (4701-ಯೋಜನೇತರ)	3955.00
ಅ)	ಕಾವೇರಿ ಕೊಳ್ಳದ ಯೋಜನೆಗಳು-4701 (ಯೋಜನೆ)	142.34
ಆ)	ಕಾವೇರಿ ಕೊಳ್ಳದ ಯೋಜನೆಗಳ ನಿರ್ವಹಣೆಗಾಗಿ (2701-ಯೋಜನೇತರ)	2187.21
ಈ)	ಕಾವೇರಿ ಕೊಳ್ಳದ ಸಣ್ಣನೀರಾವರಿ ಕಾಮಗಾರಿಗಳ ಅನುದಾನ (2702-ಯೋಜನೇತರ)	381.62
ಉ)	ಕಾವೇರಿ ಜಲಾನಯನ ಯೋಜನೆಗಳ ಅಚ್ಚುಕಟ್ಟು ಪ್ರಾಧಿಕಾರಗಳ ಹಂಚಿಕೆ (2705-ಯೋಜನೆ)	640.00
ಊ)	ರಸ್ತೆ ಅಭಿವೃದ್ಧಿ / ನಿರ್ವಹಣೆಗಾಗಿ (3054-ಯೋಜನೇತರ)	698.80

ರಾಜ್ಯದಲ್ಲಿ "ಬಿ.ಪಿ.ಎಲ್." ಪಟ್ಟಿ ತಯಾರಿಕೆ ಕುರಿತು

121(430) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿ.ಪಿ.ಎಲ್. ಪಟ್ಟಿಯನ್ನು ಪರಿಷ್ಕರಿಸಿ, ಹೊಸದಾಗಿ ತಯಾರಿಸಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಇ) ಬಿ.ಪಿ.ಎಲ್. ಪಟ್ಟಿಯನ್ನು ಪರಿಷ್ಕರಿಸುವ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ರಾಮಲಿಂಗರೆಡ್ಡಿ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಬಿ.ಪಿ.ಎಲ್. ಕುಟುಂಬಗಳ ಮನೆ ಮನೆ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ.

ಇ) ಮುಕ್ತಾಯ ಹಂತದಲ್ಲಿದೆ.

ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ನೀಡಿಕೊಳ್ಳುವುದು

122(431) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿಕರು ಬೆಳೆದ ಯಾವ್ಯಾವ ಬೆಳೆಯನ್ನು ರೈತರಿಂದ ಬೆಂಬಲ ಬೆಲೆ ನೀಡಿಕೊಳ್ಳಲು ರಾಜ್ಯ ಸರ್ಕಾರ ಉದ್ದೇಶಿಸಿದೆ;